ವಿ ರೈತ ಮಿತ್ರ



■ಬದನೆ ಬೆಳೆಯಲ್ಲಿ ಸಣ್ಣ ಎಲೆಗಳ ನಂಜು ರೋಗ ನಿರ್ವಹಣೆ ಹೇಗೆ?

। ರಮೇಶ್ ಚಿಕ್ಕಬಳ್ಳಾಪುರ

ಬದನೆ ವರ್ಷ ಪೂರ್ತಿ ಬೆಳೆಯಬಹುದಾದ ಬೆಳೆಯಾಗಿದೆ. ಇದರಲ್ಲಿ ಹೆಚ್ಚಾಗಿ ಎ ಮತ್ತು ಬಿ ಜೀವಸತ್ವಗಳಿದ್ದು, ಈ ತರಕಾರಿಯು ಮಧುಮೇಹ ರೋಗಗಳಿಗೆ ಒಳ್ಳೆಯದು. ಬದನೆ ಬೆಳೆಯಲ್ಲಿ ಸಣ್ಣ ಎಲೆಗಳ ನಂಜು ರೋಗಕ್ಕೆ ತುತ್ತಾದ ಗಿಡಗಳಲ್ಲಿ ಎಲೆಗಳ ಬೆಳವಣಿಗೆ ಸಣ್ಣದಾಗಿ ಕುಂಠಿತಗೊಳ್ಳುತ್ತವೆ. ರೋಗಕ್ಕೆ ತುತ್ತಾದ ಗಿಡಗಳು ಬಂಜೆಯಾಗುತ್ತವೆ. ನಿರ್ವಹಣೆ: ರೋಗಪೀಡಿತ ಗಿಡಗಳನ್ನು ಕಿತ್ತು ನಾಶ ಪಡಿಸಬೇಕು. ರೋಗ ಹರಡುವ ಕೀಟಗಳ ಹತೋಟಿಗಾಗಿ ಪ್ರತಿ ಲೀಟರ್ ನೀರಿಗೆ ಡೈಮಿಥೋಯೆಟ್ 2.0 ಮಿ.ಲೀ. ನಂತೆ ಬೆರೆಸಿ ಸಿಂಪಡಿಸುವುದು.

। ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

Vijayavani pg 07


ಒಳಾಂಗಣದಲ್ಲಿ ಬೆಳೆಸುವ ಸಕ್ಯೂಲೆಂಟ್ಸ್

V-karnataka pg 06

ಸುಲಭವಾಗಿ ಬೆಳೆಯುವ ಸಕ್ಯೂಲೆಂಟ್ ಸಸ್ಯಗಳು ಪ್ರಕಾಶಮಾನವಾದ ಬಣ್ಣ, ವಿಶಿಷ್ಟ ಮಾದರಿಗಳನ್ನು ಹೊಂದಿರುತ್ತವೆ. ನೇರ ಸೂರ್ಯನ ಬೆಳಕು ಇಲ್ಲದೇ ಹಾಗೂ ನಿಯಮಿತವಾಗಿ ನೀರು ಹಾಕದೆಯೂ ಒಳಾಂಗಣದಲ್ಲಿ ಬೆಳೆಸಬಹುದು.

ಲಿಥಾಪ್: ಅತ್ಯಂತ ವರ್ಣರಂಜಿತ ಮತ್ತು ಮುದ್ದಾದ ಸಕ್ಯೂಲೆಂಟ್‌ಗಳಲ್ಲಿ ಲಿಥಾಪ್ ಕೂಡ ಒಂದು. ಈ ಸಸ್ಯದ ಬಣ್ಣ ಬೆಣಚುಕಲ್ಲುಗಳಂತೆ ಕಾಣುವುದರಿಂದ ಇದನ್ನು ಲಿವಿಂಗ್ ಸ್ಟೋನ್ ಎಂದೂ ಕರೆಯಲಾಗುತ್ತದೆ.

ಸ್ಟ್ರಿಂಗ್ ಆಫ್ ಪರ್ಲ್ಸ್: ಹ್ಯಾಂಗಿಂಗ್ ಪಾಟ್‌ಗಳಲ್ಲಿ ಉತ್ತಮವಾಗಿ ಕಾಣುವ ಸಕ್ಯೂಲೆಂಟ್ ಸಸ್ಯವೆಂದರೆ ಸ್ಟ್ರಿಂಗ್ ಆಫ್ ಪರ್ಲ್ಸ್. ಮಣಿಗಳನ್ನು ಪೋಣಿಸಿರುವಂತೆ ಕಾಣುತ್ತದೆ.



ಡಾಲ್ಫಿನ್ ಸಕ್ಯೂಲೆಂಟ್: ನೀರಿನಲ್ಲಿ ಜಿಗಿಯುವ ಡಾಲ್ಫಿನ್‌ಗಳಂತೆ ಕಾಣುವ ಎಲೆಗಳನ್ನು ಹೊಂದಿರುವ ಈ ಸಕ್ಯೂಲೆಂಟ್‌ಅನ್ನು ಕನಿಷ್ಠ ಕಾಳಜಿಯೊಂದಿಗೆ ಒಳಾಂಗಣದಲ್ಲಿ ಸುಲಭವಾಗಿ ಬೆಳೆಸಬಹುದು.

ಬನ್ನಿ ಇಯರ್: ಮುಳ್ಳಿನ ಎಲೆಗಳನ್ನು ಹೊಂದಿರುವ ಮತ್ತು ಮಿಕ್ಕಿ ಮೌಸ್ ಕಿವಿಗಳಂತೆ ಕಾಣುವ ಬನ್ನಿ ಇಯರ್ ಸಕ್ಯೂಲೆಂಟ್ ಸ್ಟಡಿ ಟೇಬಲ್ ಅಥವಾ ಕಿಟಕಿಗಳ ಬಳಿ ಇಟ್ಟರೆ ಆಕರ್ಷಕವಾಗಿ ಕಾಣುತ್ತದೆ.

ಜೀಬ್ರಾ ಪ್ಲಾಂಟ್: ಆಲೋವೆರಾ ಸಸ್ಯವನ್ನು ಹೋಲುವ ಜೀಬ್ರಾ ಪ್ಲಾಂಟ್ ಬಿಳಿ ಮತ್ತು ಹಸಿರು ಪಟ್ಟೆಗಳನ್ನು ಹೊಂದಿರುತ್ತದೆ.

ಮೂನ್ ಕಾಕ್ಟಸ್: ಮೂನ್ ಕಾಕ್ಟಸ್ ಕಸಿ ಮಾಡಿದ ಸಕ್ಯೂಲೆಂಟ್ ಸಸ್ಯವಾಗಿದ್ದು, ಪ್ರಕಾಶಮಾನವಾದ ಬಣ್ಣಗಳಲ್ಲಿ ಬರುತ್ತವೆ.

ಜೇಡ್: ಸುಲಭವಾಗಿ ಜೇಡ್ ಗಿಡವನ್ನು ಬೆಳೆಸಬಹುದು. ಚಿಕ್ಕ ಗಾತ್ರದ ದಪ್ಪವಾದ ಹೊಳೆಯವ ಹಸಿರು ಬಣ್ಣದ ಎಲೆಗಳನ್ನು ಹೊಂದಿರುವ ಈ ಗಿಡ ಒಳಾಂಗಣದಲ್ಲಿ ಚೆನ್ನಾಗಿ ಬೆಳೆಯುತ್ತದೆ. ■

PLANT POWER



Source: Affordable Organic Store

Summer indoor plants can improve air quality and cool down your home. But solely choosing plants based on their look won't do much good. City-based botany professor Vaishnavi M explains, "Two things that need to be kept in mind are: choose plants that should be able to withstand warm surroundings and those that need minimal maintenance."

- Peace lily (*Spathiphyllum*), which enjoys higher humidity and moderate light
- Cacti require minimal watering – once a week and very little sunlight
- Weeping fig (*Ficus benjamina*) gives your home a tropical vibe and thrives indoors without direct sunlight
- ZZ plant (*Zamioculcas zamiifolia*), known for its resilience and minimal maintenance needs
- Spider plants (*Chlorophytum comosum*), which grow well in warm conditions and help in the purification of air

QUICK TIPS FOR BEGINNERS

- Start with resilient plants
- Water widely to prevent root rotting
- Ensure proper drainage to prevent water accumulation

BY ANJALI RAM & MAHIMA NAGARAJU

Ind Exp pg 10

54 ಲಕ್ಷಪೈಕಿ 10 ಲಕ್ಷ ರೈತರಿಗೆ ಯೋಜನೆ ಲಾಭವಿಲ್ಲ

ಎಟುಕದ ಕಿಸಾನ್ ಸಮ್ಮಾನ್!

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ಭೂ ದಾಖಲೆಗಳ ಕೊರತೆ, ಇಕೆವೈಸಿ ಸಮಸ್ಯೆ, ತೆರಿಗೆ ಪಾವತಿ ಸೇರಿದಂತೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ರೈತರು ಪಿಎಂ ಕಿಸಾನ್ ಸಮ್ಮಾನ್ ಯೋಜನೆಯಿಂದ ವಂಚಿತರಾಗಿದ್ದಾರೆ!

ರಾಜ್ಯದಲ್ಲಿ ಗರಿಷ್ಠ ಮಟ್ಟದ ರೈತರು ಅಂದರೆ 54 ಲಕ್ಷಕ್ಕೂ ಅಧಿಕ ರೈತರು ನೋಂದಣಿ ಮಾಡಿ ಯೋಜನೆಯ ಲಾಭ ಪಡೆಯುತ್ತಿದ್ದರು. ಈ ಪೈಕಿ 44.20 ಲಕ್ಷ ರೈತರಿಗೆ ಮಾತ್ರ ಯೋಜನೆಯ ಲಾಭ ಸಿಗುವಂತಾಗಿದೆ. ಪ್ರತಿ ಕಂತಿನ ಸಂದರ್ಭದಲ್ಲಿ ರೈತರ ಸಂಖ್ಯೆ ಏರುಪೇರಾಗುತ್ತದೆ. ಏಕೆಂದರೆ, ರೈತರ ನೋಂದಣಿ ಕಾರ್ಯ ನಿರಂತರ ಪ್ರಕ್ರಿಯೆಯಾಗಿದ್ದು, ಅರ್ಹರನ್ನು ಸೇರಿಸುವುದು ಹಾಗೂ ಅನರ್ಹರನ್ನು ತೆಗೆಯುವ ಪ್ರಕ್ರಿಯೆ ನಡೆಯುತ್ತದೆ. ಇದನ್ನು ಗ್ರಾಮ ನೋಡಲ್ ಅಧಿಕಾರಿಗಳು ಪರಿಶೀಲಿಸುತ್ತಾರೆ.

2019ರ ನಂತರ ಖಾತೆ ಮಾಡಿಸಿಕೊಂಡ ಲಕ್ಷಾಂತರ ಮಂದಿಗೆ ಈ ಯೋಜನೆಯ ಲಾಭವೇ ಸಿಗುತ್ತಿಲ್ಲ. ಇದಕ್ಕೂ ಮೊದಲು ಯಾವ ರೈತರು ತಮ್ಮ ಹೆಸರಿನಲ್ಲಿ ಖಾತೆ ಹೊಂದಿರುತ್ತಾರೋ ಅಂಥವರು ರೈತ ಸಂಪರ್ಕ ಕೇಂದ್ರಗಳಲ್ಲಿ ಆಧಾರ್ ಮತ್ತು ಪಹಣಿಯೊಂದಿಗೆ ಫ್ರೂಟ್ಸ್ ಐಡಿ ತಂತ್ರಾಂಶದಲ್ಲಿ ಹೆಸರು ನೋಂದಣಿ ಮಾಡಿಸಿಕೊಂಡು ಇಕೆವೈಸಿಯೊಂದಿಗೆ ಕಿಸಾನ್ ಸಮ್ಮಾನ್ ಯೋಜನೆಯ ಲಾಭ ಪಡೆಯಬಹುದಿತ್ತು. ಒಂದು ವೇಳೆ ಯೋಜನೆಯ ಲಾಭ ಪಡೆಯುತ್ತಿದ್ದ ಜಮೀನಿನ ಮಾಲೀಕರು ನಿಧನ ಹೊಂದಿದರೆ, ಇತರೆ ವಾರಸುದಾರರು ಪೌತಿ ಖಾತೆ ಮಾಡಿಸಿದರೆ ಆಗ ಈ ಯೋಜನೆಗೆ ಅರ್ಹರಾಗುತ್ತಿದ್ದರು. ಆದರೆ, ಕೇಂದ್ರ ಸರಕಾರದ ಮಾರ್ಗಸೂಚಿಯಂತೆ 2019ರ ನಂತರ ಜಮೀನು ಖರೀದಿಸಿದವರು ಇದರ ವ್ಯಾಪ್ತಿಗೆ ಬರುವುದಿಲ್ಲ ಎಂದು ಕೃಷಿ ಇಲಾಖೆ ಹೇಳುತ್ತಿದೆ.

ರಾಜ್ಯದ ಫಲಾನುಭವಿಗಳು: ರಾಜ್ಯದ 44.20 ಲಕ್ಷಕ್ಕೂ ಅಧಿಕ ರೈತ ಫಲಾನುಭವಿಗಳಿಗೆ ಕೇಂದ್ರ ಸರಕಾರದಿಂದ ಒಟ್ಟಾರೆ 884.01 ಕೋಟಿ ರೂ.ಗಳನ್ನು ಪ್ರಧಾನ ಮಂತ್ರಿಯವರು ರೈತರ ಆಧಾರ್ ಜೋಡಿತ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದ್ದಾರೆ.



ಯೋಜನೆಯ ಉದ್ದೇಶ

ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತ ಕುಟುಂಬಗಳಿಗೆ ಕೃಷಿ ಚಟುವಟಿಕೆಯಲ್ಲಿ ಉತ್ತಮ ಪರಿಕರಗಳನ್ನು ಬಳಸಿ ಬೆಳೆಗಳ ಆರೋಗ್ಯ ನಿರ್ವಹಣೆ ಹಾಗೂ ಹೆಚ್ಚಿನ ಇಳುವರಿ ಪಡೆದು ನಿರೀಕ್ಷಿತ ಆದಾಯ ಗಳಿಸಲು ನೆರವಾಗಲು ವಾರ್ಷಿಕ 6 ಸಾವಿರ ರೂ. ಗಳ ಆರ್ಥಿಕ ನೆರವು ನೀಡಲಾಗುತ್ತಿದೆ. 2 ಸಾವಿರ ರೂ.ಗಳಂತೆ 3 ಕಂತುಗಳಲ್ಲಿ 4 ತಿಂಗಳಿಗೊಮ್ಮೆ ಅನುದಾನ ನೀಡಲಾಗುತ್ತದೆ.

ಯಾರು ಅನರ್ಹರು

ಭೂಮಿ ಹೊಂದಿರುವ ಸಂಘ, ಸಂಸ್ಥೆಗಳು, ಮಾಜಿ ಮತ್ತು ಹಾಲಿ ಸಾಂವಿಧಾನಿಕ ಹುದ್ದೆಗಳಲ್ಲಿ ಕುಟುಂಬ ಸದಸ್ಯರು, 10 ಸಾವಿರ ಅಥವಾ ಅದಕ್ಕಿಂತ ಹೆಚ್ಚಿನ ಪಿಂಚಣಿ ಪಡೆಯುವ ನಿವೃತ್ತರು(ಗ್ರೂಪ್ ಡಿ ಹೊರತುಪಡಿಸಿ), ಕಳೆದ ಸಾಲಿನಲ್ಲಿ ಆದಾಯ ತೆರಿಗೆ ಪಾವತಿಸಿದವರು, ವೈದ್ಯರು, ಎಂಜಿನಿಯರ್‌ಗಳು, ವಕೀಲರು, ಲೆಕ್ಕ ಪರಿಶೋಧಕರು, ವಾಸ್ತುಶಿಲ್ಪದಂತಹ ವೃತ್ತಿಪರರು ಯೋಜನೆಗೆ ಅನರ್ಹರು.

2023ರ ಅಕ್ಟೋಬರ್ 25ರ ಹೊಸ ಮಾರ್ಗಸೂಚಿ ಅನ್ವಯ ಕನಿಷ್ಠ ಮೂರು ವರ್ಷ ಆದಾಯ ತೆರಿಗೆ ಪಾವತಿಸಿದ್ದರೆ ಯೋಜನೆಗೆ ಅನರ್ಹರಾಗಿರುತ್ತಾರೆ.

V-karnataka pg 01

For more information visit
University Library Website
Web - uasbagrilibindia.org
E-mail- librarian@uasbangalore.edu.in



ಜಿಲ್ಲಾ ನೋಟ

ಕುಸಿದ ಆಲೂಗಡ್ಡೆ ದರ, ಶೈತ್ಯಾಗಾರಗಳಿಗೆ ಬರ

ಎ ಮುನಿರಾಜು ಎಂ.ಅರಿಕೆರೆ, ಚಿಕ್ಕಬಳ್ಳಾಪುರ

ಇದು ಹೂವು ಹಣ್ಣು ತರಕಾರಿ ಬೆಳೆಯುವ ಜಿಲ್ಲೆ. ಇಲ್ಲಿ ಆಲೂಗಡ್ಡೆ, ದ್ರಾಕ್ಷಿ, ಟೊಮೇಟೊ, ಹೂವು, ಇತ್ಯಾದಿ ಬೆಳೆಗಳು ಯಥೇಚ್ಛ ಬೆಳೆಯಲಾಗುತ್ತದೆ. ಈ ಉತ್ಪನ್ನಗಳ ಬೆಲೆ ಪಾತಾಳ ಮುಟ್ಟಿದಾಗ ಶೈತ್ಯಾಗಾರದ ದಾಸ್ತಾನು ಅನಿವಾರ್ಯ. ಮತ್ತೆ ಬೆಲೆ ಏರಿಕೆಯಾದಾಗ ಮಾರಾಟ ಮಾಡಲು ರೈತರಿಗೆ ಅನುಕೂಲವಾಗುತ್ತದೆ. ಆದರೆ ಇಲ್ಲಿ ಒಂದೇ ಒಂದು ಸರಕಾರಿ ಉಸ್ತುವಾರಿಯ ಶೈತ್ಯಾಗಾರವಿಲ್ಲದಿರುವುದು ರೈತರನ್ನು ಕಂಗಾಲಾನ್ನಾಗಿಸಿದೆ.

ಆಲೂಗಡ್ಡೆಗಿಲ್ಲ ಬೇಡಿಕೆ

ಹೌದು. ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆ ಆಲೂಗಡ್ಡೆಯನ್ನು ಸುಮಾರು ನಾಲ್ಕು ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗಿದೆ. ಜಿಲ್ಲೆಯಲ್ಲಿ ಬೆಳೆಯುವ ಗುಣಮಟ್ಟದ ಆಲೂಗಡ್ಡೆಗೆ ರಾಜಧಾನಿ ಬೆಂಗಳೂರು, ಆಂಧ್ರ, ಮಹಾರಾಷ್ಟ್ರ, ದೂರದ ದೆಹಲಿ, ಉತ್ತರ ಭಾರತದ ಇತರೆ ರಾಜ್ಯಗಳಲ್ಲಿ ಭಾರೀ ಬೇಡಿಕೆಯಿದೆ. ಆದರೆ ಈ ಬಾರಿ ಎಲ್ಲೆಡೆ ಉತ್ತಮ ಬೆಳೆಯಾಗಿರುವ ಕಾರಣ ನಮ್ಮ ರಾಜ್ಯದ ಆಲೂಗಡ್ಡೆಗೆ ಬೇಡಿಕೆ ಇಲ್ಲವಾಗಿರುವುದು ರೈತರು ಕಂಗಾಲಾಗುವಂತೆ ಮಾಡಿದೆ.

ದೇವೇಗೌಡರಿಗೆ ಬಿತ್ತನೆ ಬೀಜ ನೀಡಿದ ಜಿಲ್ಲೆ

ಒಂದು ಕಾಲದಲ್ಲಿ ಮಾಜಿ ಪ್ರಧಾನಮಂತ್ರಿ ಎಚ್.ಡಿ.ದೇವೇಗೌಡರು ಚಿಕ್ಕಬಳ್ಳಾಪುರ ತಾಲೂಕಿನ ಮಂಚನಬಲೆಯಿಂದ ಬಿತ್ತನೆ ಆಲೂಗಡ್ಡೆ ಖರೀದಿ ಮಾಡಿ ಹಾಸನದಲ್ಲಿ ಆಲೂಗಡ್ಡೆ ಬೆಳೆಯುತ್ತಿದ್ದರು. ಅಂತಹ ಹಿರಿಮೆಯಿರುವ ಜಿಲ್ಲೆಯಲ್ಲಿ ಬೆಲೆ ಮಾತ್ರ ಪಾತಾಳಕ್ಕೆ ಕುಸಿದಿದೆ. ಒಂದೆರೆಡು ತಿಂಗಳ ಮಟ್ಟಿಗೆ ಕೋಲ್ಡ್ ಸ್ಟೋರೇಜ್‌ನಲ್ಲಿ ಆಲೂಗಡ್ಡೆ ದಾಸ್ತಾನು ಮಾಡಲು ವಾರಗಟ್ಟಲೇ ಕಾಯುವಂತಾಗಿದೆ.

ಆಲೋ ದರ ಕುಸಿತ

ಸದ್ಯ 50 ಕೆ.ಜಿ ಆಲೂಗಡ್ಡೆ ಚೀಲಕ್ಕೆ 400 ರಿಂದ 600 ರೂ. ಬೆಲೆಯಿದ್ದು ಹಾಕಿದ ಬಂಡವಾಳವೂ ಕೈಗೆ ಬರದಂತಾಗಿದೆ. ಖಾಸಗಿ ಶೈತ್ಯಾಗಾರದತ್ತ ರೈತರು ಮುಖ ಮಾಡಿದ್ದಾರೆ. ದುಬಾರಿ ಬೆಲೆ ತೆತ್ತಾದರೂ ಬೆಳೆ ಉಳಿಸಿಕೊಳ್ಳಲು ಮುಂದಾಗಿದೆ. ಬೇಸಿಗೆಯ ಬಿಸಿಲಿಗೆ ಆಲೂಗಡ್ಡೆ ಹಾಳಾಗುತ್ತದೆ. ಆದರೂ ವಿಧಿಯಿಲ್ಲದೆ ಖಾಸಗಿ ಶೈತ್ಯಾಗಾರದಲ್ಲಾದರೂ ಜಾಗ ಸಿಗಬಹುದೆಂಬ ಆಸೆಯಿಂದ ವಾರಗಟ್ಟಲೆ ಆಲೂಗಡ್ಡೆ ಲೋಡ್ ತಂದು ಶೈತ್ಯಾಗಾರದ ಮುಂದೆ ನಿಲ್ಲಿಸಿಕೊಂಡು ಕಾಯುತ್ತಿದ್ದಾರೆ. ಇದರಿಂದ ವಾಹನದಲ್ಲಿಯೇ ಕೊಳೆಯುವಂತಾಗಿ ರೈತರನ್ನು ಕಂಗಾಲು ಮಾಡಿದೆ.

ಬೆಳೆಗಾರನ ಸಂಕಟ

ಪ್ರಗತಿಪರ ರೈತ ಬಸವರಾಜು ಮಾತನಾಡಿ, ಒಂದು ಎಕರೆಯಲ್ಲಿ ಆಲೂಗಡ್ಡೆ ಬೆಳೆಯಬೇಕಾದರೆ ಬಿತ್ತನೆ ಬೀಜ ಗೊಬ್ಬರ, ಔಷಧ ಸೇರಿ ಕನಿಷ್ಠ 80 ರಿಂದ 1 ಲಕ್ಷ



ನಂದಿ ಕೋಲ್ಡ್ ಸ್ಟೋರೇಜ್ ಸಮೀಪ ಆಲೂಗಡ್ಡೆ ಹೊತ್ತ ಲಾರಿಗಳು ನಿಂತಿರುವುದು.

- ಜಿಲ್ಲೆಯಲ್ಲಿ ಇಲ್ಲ ವಾಣಿಜ್ಯ ಬೆಳೆಗಳಿಗೆ ಶೈತ್ಯಾಗಾರ
- ದುಬಾರಿ ಬೆಲೆ ತೆತ್ತರೂ ಸಿಗದ ಕೋಲ್ಡ್ ಸ್ಟೋರೇಜ್
- ಬೆಲೆ ಇಳಿಕೆಯಿಂದ ಪಾರಾಗಲು ರೈತರ ಪರದಾಟ
- ರಸ್ತೆಯಲ್ಲೇ ನಿಲ್ಲುತ್ತಿವೆ ಆಲೂಗಡ್ಡೆ ಹೊತ್ತ ವಾಹನ

ಖರ್ಚಾಗಲಿದೆ. ಉತ್ತಮ ಇಳುವರಿ ಬಂದರೆ 150 ರಿಂದ 200 ತುಂಡು ಆಗಲಿದೆ. ಅಂದರೆ 100 ಕ್ವಿಂಟಾಲ್ ಬೆಳೆ ಬರಲಿದೆ. ಒಂದು ತಿಂಗಳ ಹಿಂದೆ 50 ಕೆ.ಜಿಗೆ 2ಸಾವಿರ ಸಮೀಪದವರೆಗೆ ಇದ್ದ ಬೆಲೆ ಸದ್ಯ ಮಾರುಕಟ್ಟೆಯಲ್ಲಿ ಕೆ.ಜಿ.ಗೆ 10 ರು. ಇದೆ. ರೈತ ಲಾಭ ನೋಡಬೇಕಾದರೆ 50 ಕೆ.ಜಿ.ಮೂಟೆಗೆ ಕನಿಷ್ಠ 1800 ರು.ಗಳಿಗೆ ಮಾರಾಟವಾಗಬೇಕಿದೆ. ಸದ್ಯಕ್ಕೆ ಜಿಲ್ಲೆಯ ಮಾರುಕಟ್ಟೆ ಬಿಡಿ, ಬೆಂಗಳೂರಲ್ಲಿ ಕೂಡ ಆಲೂಗಡ್ಡೆ ಕೇಳುವವರೇ ಇಲ್ಲ. ಉತ್ತಮ ಇಳುವರಿ ಬಂದಿರುವ ಹೊತ್ತಿನಲ್ಲಿ ಬೆಲೆಯಿಲ್ಲದೇ ರೈತರ ಬದುಕು ಅತ್ತ ದರಿ ಇತ್ತ ಪುಲಿ ಎಂಬಂತಾಗಿದೆ. ಬೆಲೆ ಬರುವವರೆಗೆ ಕಾಪಾಡಿಕೊಳ್ಳೋಣ ಎಂದರೆ ಶೈತ್ಯಾಗಾರಗಳ ಕೊರತೆ ಸಮಸ್ಯೆ ಭೂತದಂತೆ ಕಾಡಿದೆ ಎನ್ನುತ್ತಾರೆ.

ಶೈತ್ಯಾಗಾರಗಳೇ ಇಲ್ಲ

ಜಿಲ್ಲೆಯಲ್ಲಿ ಆಲೂಗಡ್ಡೆಯನ್ನು ಬೆಳೆಯುವ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದು ಒಳ್ಳೆ ಬೆಲೆಯಿದ್ದಾಗ ತೋಟದಲ್ಲಿಯೇ ಮಾರುತ್ತಾರೆ. ದರ ಕುಸಿದಾಗ ಅವರೇ ತಂಪಾದ ವಾತಾವರಣದಲ್ಲಿ ದಾಸ್ತಾನಿಟ್ಟು ಬೆಲೆ ಏರಿಕೆಯಾದಾಗ ಮಾರಾಟ ಮಾಡುವುದು ವಾಡಿಕೆ. ಆದರೆ ಜಿಲ್ಲೆಯಲ್ಲಿ ಸರಕಾರಿ ಶೈತ್ಯಾಗಾರಗಳೇ ಇಲ್ಲ.

ಖಾಸಗಿ ಕೋಲ್ಡ್ ಸ್ಟೋರೇಜ್

ಸದ್ಯಕ್ಕೆ ರೈತರು ಚಿಕ್ಕಬಳ್ಳಾಪುರದ ಖಾಸಗಿ ನಂದಿ ಕೋಲ್ಡ್ ಸ್ಟೋರೇಜ್‌ನಲ್ಲಿ ದಾಸ್ತಾನು ಮಾಡುತ್ತಾರೆ. ಈ ಬಾರಿ ರೋಗ ಬಾಧೆಯಿಲ್ಲದೆ ಉತ್ತಮವಾಗಿ ಇಳುವರಿ ಬಂದಿರುವ ಕಾರಣ ಬೆಲೆ ಇಳಿಕೆಯಾಗಿದೆ. ಇದು ಒಂದೆರಡು ತಿಂಗಳ ಸಮಸ್ಯೆಯಷ್ಟೇ.ಏಪ್ರಿಲ್ ಮೇ ತಿಂಗಳಲ್ಲಿ ಬೆಲೆಯೇರಿದಾಗ ಮಾರುತ್ತಾರೆ. ಅಲ್ಲಿಯವರೆಗೆ ಶೈತ್ಯಾಗಾರಗಳಲ್ಲಿ ಕಾಪಾಡಿಕೊಳ್ಳುವುದು ಅನಿವಾರ್ಯ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಗಾಯಿತ್ರಿ.

ದುಬಾರಿ ಬಾಡಿಗೆ

ಹೊರವಲಯದ ಖಾಸಗಿ ನಂದಿ ಕೋಲ್ಡ್ ಸ್ಟೋರೇಜ್ ಇದ್ದು ಅದರಲ್ಲಿ ಮೂರು ತಿಂಗಳ ದಾಸ್ತಾನು ಮಡಲು ಒಂದು ಮೂಟೆಗೆ 110



ರು.ಬಾಡಿಗೆ ನಿಗದಿ ಮಾಡಿದ್ದಾರೆ. ದುಬಾರಿ ಬೆಲೆ ತೆರಲು ರೈತರು ಸಿದ್ಧವಿದ್ದರೂ ಅಲ್ಲೂ ಜಾಗವಿಲ್ಲದೆ ಸುಡು ಬಿಸಿಲಿನಲ್ಲಿ ರೈತರು ಆಲೂಗಡ್ಡೆ ಮೂಟೆ ತುಂಬಿಸಿ ತಂದಿದ್ದಾರೆ. ಸುಮಾರು ಹದಿನೈದು ಇಪ್ಪತ್ತು ದಿನ ಕಾದರೂ ಜಾಗ ಸಿಕ್ಕಿಲ್ಲ, ಬಿಸಿಲಿನ ತಾಪಕ್ಕೆ ಮೂಟೆಯಲ್ಲೇ ಆಲೂಗಡ್ಡೆ ಕೊಳೆಯುವ ಸ್ಥಿತಿಗೆ ತಂದಿದ್ದು ರೈತನ ಬೆವರಿಗೆ ಬೆಲೆಯಿಲ್ಲದಂತಾಗಿದೆ.

ಈ ಹಿಂದೆ ನಗರದ ಎಪಿಎಂಸಿಯಲ್ಲಿ ಸರಕಾರ ಕೋಲ್ಡ್ ಸ್ಟೋರೇಜ್ ನಿರ್ಮಿಸಿತ್ತು. ಅದು ಬಳಕೆಯಾಗದೇ ಮತ್ತು ನಿರ್ವಹಣೆ ಇಲ್ಲದೆ ಕಳೆದ 15 ವರ್ಷಗಳ ಹಿಂದೆ ಹಾಳು ಬಿತ್ತು. ಈಗಲಾದರೂ ಸರಕಾರ ಎಚ್ಚೆತ್ತು ಕೋಲ್ಡ್ ಸ್ಟೋರೇಜ್ ನಿರ್ಮಿಸಬೇಕಿದೆ.

ಒಂದು ಮರ ಉಳಿಸಲು ಯೋಜನೆ ಬದಲಿಸಿದ ಜಪಾನ್!



ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ಜಪಾನಿನ ಟೋಕಿಯೋ ಮತ್ತು ನಗೋಯಾ ಮಧ್ಯೆ ಹೈಸ್ಪೀಡ್ ರೈಲು ಮಾರ್ಗ ನಿರ್ಮಿಸಲು ಅಲ್ಲಿನ ರೈಲ್ವೆ ಇಲಾಖೆ ಸರಕಾರಕ್ಕೆ ಒಂದು ಪ್ರಸ್ತಾವನೆ ಸಲ್ಲಿಸಿತು. ಜಪಾನಿನಲ್ಲಿ ಯಾವುದೇ ಅಭಿವೃದ್ಧಿ ಯೋಜನೆ ರೂಪಿಸುವಾಗ, ಗಮನದಲ್ಲಿರಿಸಿಕೊಳ್ಳಬೇಕಾದ ಒಂದು ಮುಖ್ಯ ಅಂಶ ಅಂದ್ರೆ ಪರಿಸರಕ್ಕೆ ಧಕ್ಕೆಯಾಗುವ ಯಾವ ಅಂಶಗಳೂ ಇರಕೂಡದು. ಅದರಲ್ಲೂ ಕಾಡು, ಕೊಳ, ಕೆರೆ, ಜಲಾಶಯ, ನದಿ ಮುಖಜ ಭೂಮಿಗೆ ಸ್ವಲ್ಪವೂ ಹಾನಿಯಾಗಲೇಬಾರದು. ಪರಿಸರ ಹಿತ ಕಾಪಾಡುವ ದೃಷ್ಟಿಯಿಂದ ಆ ಸದರಿ ಯೋಜನೆಯಲ್ಲಿ ಯಾವ ಐಬು ಇದ್ದಿರಲಿಲ್ಲ. ಆದರೆ ಒಂದೇ ಒಂದು (ಸಣ್ಣ) ಕಾರಣಕ್ಕೆ ಆ ಯೋಜನೆಗೆ ಸರಕಾರ ಅನುಮತಿ ನೀಡಲು ನಿರಾಕರಿಸಿತು. ಜಪಾನಿನ ಒಬ್ಬ ರೈತನ ತೋಟದ ಮೂಲಕ ಆ ರೈಲು ಮಾರ್ಗ ಹಾದುಹೋಗುತ್ತಿತ್ತು. ಅಲ್ಲಿ ಸುಮಾರು ನೂರಾ ನಲವತ್ತು ವರ್ಷಗಳ ಒಂದು ಅಪರೂಪದ ತಳಿಯ ಮರವೊಂದು ಇತ್ತು. ಉದ್ದೇಶಿತ ನೂತನ ರೈಲು ಮಾರ್ಗ ಆ ಮರವನ್ನು ನೆಲ ಸಮಾಧಿ ಮಾಡಿ ಸಾಗುತ್ತಿತ್ತು.

ಆ ರೈಲು ಯೋಜನೆಗೆ ಅನುಮತಿ ನಿರಾಕರಿಸಲು ಜಪಾನ್ ಸರಕಾರಕ್ಕೆ ಅದೊಂದೇ ಕಾರಣ ಸಾಕಾಯಿತು!

ಅಷ್ಟು ಹಳೆಯ, ಅಪರೂಪದ ಮರವನ್ನು ಯಾವ ಕಾರಣಕ್ಕೂ ಕಡಿಯುವಂತಿಲ್ಲ. ಆ ಜಾತಿಯ ಮರಗಳ ಸಂಖ್ಯೆ ಹೆಚ್ಚಿಲ್ಲ. ಆ ತಳಿಯನ್ನು ಸಂರಕ್ಷಿಸುವುದು ನಮ್ಮ ಕರ್ತವ್ಯ. ಅಲ್ಲದೇ ಆ ಮರವನ್ನು ಆಶ್ರಯಿಸಿ, ಅಸಂಖ್ಯ ಪಕ್ಷಿಗಳು, ಜೀವಿಗಳು ಬದುಕು ಕಟ್ಟಿಕೊಂಡಿರುತ್ತವೆ. ಅಂಥ ಮರವನ್ನು ಏಕಾಏಕಿ ಕಡಿದು ಹಾಕಿದರೆ, ಅದರಿಂದ ಆಗುವ ಹಾನಿಯನ್ನು ಊಹಿಸುವುದು ಕಷ್ಟ. ಹೀಗಾಗಿ ಆ ಮರವನ್ನು ಉಳಿಸಿಕೊಂಡು ಯೋಜನೆಯನ್ನು ಮಾರ್ಪಡಿಸಿ ಎಂದು ಸರಕಾರ ರೈಲ್ವೆ ಇಲಾಖೆಗೆ ಸೂಚಿಸಿ, ಕಡತವನ್ನು ವಾಪಾಸ್ ಕಳಿಸಿತು.

ಇದಕ್ಕೆ ರೈಲ್ವೆ ಇಲಾಖೆ ಪರಿಹಾರ ರೂಪಿಸಿ, ಯೋಜನೆಯನ್ನು ಪುನಃ ಮಂಡಿಸಿತು. ಆ ಪ್ರಕಾರ, ಆ ಮರವನ್ನು ಕಡಿಯುವುದಿಲ್ಲ, ಆದರೆ ಆ ಮರವನ್ನು ಅನಾಮತ್ತು ಎತ್ತಿ ಬೇರೆಡೆ ಸ್ಥಳಾಂತರಿಸಿ, ಸೂಕ್ತವಾದ ಜಾಗದಲ್ಲಿ ನೆಡುತ್ತೇವೆ. ಇದರಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ ಎಂದು ಹೇಳಿತು.

ಆದರೂ ಸರಕಾರ ಆ ಯೋಜನೆಯನ್ನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಸರಕಾರ ನೀಡಿದ ಕಾರಣ – ನೂರಾ ನಲವತ್ತು ವರ್ಷಗಳ ಆ ಮರದ ಬೇರುಗಳು ಬಹುದೂರ ಹರಡಿಕೊಂಡಿರುತ್ತವೆ. ಆ ಮರವನ್ನು ಅನಾಮತ್ತು ಎತ್ತುವುದರಿಂದ ಅದರ ಬೇರುಗಳು ಘಾಸಿಯಾಗುವ ಸಂಭವಗಳೇ ಹೆಚ್ಚು. ಇದು ಆ ಮರದ ಅಸ್ತಿತ್ವಕ್ಕೇ ಧಕ್ಕೆ ತರಬಹುದು. ಅಂಥ ಮರವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಬೇಕು. ರೈಲ್ವೆ ಮಾರ್ಗವನ್ನು ಬದಲಿಸಬಹುದು. ಆದರೆ ಆ ತಳಿಯ ಇನ್ನೊಂದು ಮರವನ್ನು ಸೃಷ್ಟಿಸುವುದು ಅಸಾಧ್ಯ. ಆದ್ದರಿಂದ ಮರವನ್ನು ಸ್ಥಳಾಂತರಿಸುವ ಪ್ರಸ್ತಾವವನ್ನು ಒಪ್ಪಲು ಸಾಧ್ಯವಿಲ್ಲ.

ಆಗ ರೈಲ್ವೆ ಇಲಾಖೆ ಅಧಿಕಾರಿಗಳು ತಲೆ ಕೆಡಿಸಿಕೊಂಡರು. ಒಂದು ಮರ ಕಡಿಯುವುದಕ್ಕೆ ಪ್ರಾಯಶ್ಚಿತ್ತವಾಗಿ ಸಾವಿರ ಗಿಡಗಳನ್ನು ನೆಡುತ್ತೇವೆ, ಒಂದು ಸಣ್ಣ ನೆಡುತೋಪನ್ನು ನಿರ್ಮಿಸುತ್ತೇವೆ ಎಂಬ ಪರಿಹಾರದೊಂದಿಗೆ ಯೋಜನೆಯನ್ನು ಮರು ಮಂಡಿಸಿದರು. ಅದಕ್ಕೂ ಸರಕಾರ ಸೈ ಎನ್ನಲಿಲ್ಲ.

ಸರಕಾರದ ವಾದವೇ ಬೇರೆ ಇತ್ತು. 'ಸಾವಿರ ಗಿಡ ನೆಡುವುದು ನೂರಾ ನಲವತ್ತು ವರ್ಷಗಳ ಮರವನ್ನು ಸಾಯಿಸುವುದಕ್ಕೆ ಪರಿಹಾರವಾಗಲಾರದು. ಸಾವಿರ ಗಿಡಗಳು ಮರವಾಗಲು ಇಪ್ಪತ್ತು-ಮೂವತ್ತು ವರ್ಷಗಳಾದರೂ ಬೇಕು. ಅಲ್ಲಿಯ ತನಕ ಪರಿಸರಕ್ಕೆ ಆಗುವ ಹಾನಿಯನ್ನು ಲೆಕ್ಕ ಹಾಕಲೂ ಸಾಧ್ಯವಿಲ್ಲ. ಮರದ ಜಾಗದಲ್ಲಿ ಮನುಷ್ಯರನ್ನು ಕಲ್ಪಿಸಿಕೊಳ್ಳಿ, ಆಗ ನಮ್ಮ ಉತ್ತರ ಇದೇ ರೀತಿ ಇರುವುದಾ? ಸಾಧ್ಯವೇ ಇಲ್ಲ, ಹೊಸ ಮರಗಳನ್ನು ಬೆಳೆಸೋಣ, ಆದರೆ ಇರುವ ಮರವನ್ನು ಉಳಿಸಿಕೊಳ್ಳುವುದು ಅದಕ್ಕಿಂತ ಮುಖ್ಯ. ಇಲ್ಲಿ ಮರಗಳ ಸಂಖ್ಯೆ ಮುಖ್ಯವಲ್ಲ. ಮರವಷ್ಟೇ ಮುಖ್ಯ. ಒಂದು ಮರವನ್ನು ಸಂರಕ್ಷಿಸುವುದೂ ನಮ್ಮ ಧೋರಣೆಯಾಗಬೇಕು. ಆ ಚಿಂತನೆಯಲ್ಲಿ ಯೋಜನೆಯನ್ನು ನಿರ್ಮಿಸೋಣ.'

ಆ ಹಂತದಲ್ಲಿ ಅಕ್ಷರಶಃ ರೈಲ್ವೆ ಅಧಿಕಾರಿಗಳ ತಲೆ ಚಿಟ್ಟು ಹಿಡಿದು ಹೋಯಿತು. ಆಗ ಉಳಿದಿದ್ದು ರೈಲು ಮಾರ್ಗ ಬದಲಿಸುವ ಉಪಾಯವೊಂದೇ. ಅದು ಸುಲಭವಾಗಿರಲಿಲ್ಲ. ಕಾರಣ ರೈಲು ಮಾರ್ಗದ ಪುನರ್ ನಕ್ಷೆ ರೂಪಿಸಬೇಕು, ಬದಲಿ ಮಾರ್ಗವನ್ನು ಸೂಚಿಸಬೇಕು, ಆ ಮಾರ್ಗದಲ್ಲೂ ಯಾವ ಮರಗಳು ಇರಕೂಡದು, ಆಗ ಮಾರ್ಗ ನೇರವಾಗಿರದೇ ಸುತ್ತು ಬಳಸಿ ಹೋಗುತ್ತದೆ,



ಇದರಿಂದ ಯೋಜನೆ ವಿಳಂಬವಾಗುತ್ತದೆ, ಖರ್ಚು ಹೆಚ್ಚುತ್ತದೆ... ಇತ್ಯಾದಿ, ಇತ್ಯಾದಿ.

ಈ ಯಾವ ಕಾರಣವನ್ನೂ ಸರಕಾರ ಒಪ್ಪಿಕೊಳ್ಳಲಿಲ್ಲ. ರೈಲ್ವೆ ಇಲಾಖೆಯ ಆ ವಾದವನ್ನೇ ಸಾರಾಸಗಟು ತಿರಸ್ಕರಿಸಿಬಿಟ್ಟಿತು!

ಆಗ ರೈಲ್ವೆ ಅಧಿಕಾರಿಗಳು ತಲೆ ಮೇಲೆ ಕೈ ಹೊತ್ತು ಕುಳಿತುಬಿಟ್ಟರು. ಆ ಹೊತ್ತಿಗೆ ಎರಡು ತಿಂಗಳು ಕಳೆದು ಹೋಗಿತ್ತು. ಸರಕಾರದ ಆಲೋಚನೆ ಏನು ಎಂಬುದನ್ನು ತಿಳಿದುಕೊಳ್ಳದಷ್ಟು ಆ ಅಧಿಕಾರಿಗಳು ದಡ್ಡರಾಗಿರಲಿಲ್ಲ. ಆ ಮರವನ್ನು ಉಳಿಸುವ ಉದ್ದೇಶದಿಂದ ರೈಲು ಮಾರ್ಗವನ್ನು ಒಂದೂವರೆ ಕಿಮೀ ಸುತ್ತುಬಳಸಿ ಮಾರ್ಪಡಿಸಲು ನಿರ್ಧರಿಸಿದರು. ಅದಕ್ಕಾಗಿ ಹೆಚ್ಚುವರಿ ಇನ್ನೂರಾ ಹತ್ತು ಕೋಟಿ ಯೆನ್ ಖರ್ಚಾಗುತ್ತದೆ ಎಂದು ಅಂದಾಜು ಹಾಕಿದರು. ಮಾರ್ಗ ಬದಲಾವಣೆಯಿಂದ ಮೂರು ತಿಂಗಳು ಯೋಜನೆ ವಿಳಂಬವಾಗುತ್ತದೆ ಎಂದು ಲೆಕ್ಕ ಹಾಕಿದರು. ಈ ಎಲ್ಲ ಮಾರ್ಪಾಡುಗಳೊಂದಿಗೆ ಹೊಸ ಯೋಜನೆಯನ್ನು ಸರಕಾರದ ಅನುಮತಿಗಾಗಿ ಮತ್ತೊಮ್ಮೆ ಮಂಡಿಸಿದರು. ಸರಿ, ಕೇವಲ ಐದು ದಿನಗಳಲ್ಲಿ ಸರಕಾರ ಅದಕ್ಕೆ ಸಮ್ಮತಿ ಸೂಚಿಸಿತು.

ಒಂದೇ ಒಂದು ಮರ ಉಳಿಸಲು ಸರಕಾರ ಅಷ್ಟೊಂದು ಹಠ ಹಿಡಿಯಿತು. ರೈಲ್ವೆ ಅಧಿಕಾರಿಗಳು ಹೇಳುವ ಯಾವ ಕಾಗಕ್ಕ-ಗುಬ್ಬಕ್ಕನ ಕಥೆಯನ್ನೂ ಕೇಳಲಿಲ್ಲ. ಅದಕ್ಕಾಗಿ ಸಮಯ ಹಿಡಿಯಬಹುದು, ಇನ್ನೂರಾ ಹತ್ತು ಕೋಟಿ ಯೆನ್ ಖರ್ಚಾಗಬಹುದು, ಆಗಲಿ ಪರವಾಗಿಲ್ಲ, ಆದರೆ ಒಂದು ಮರಕ್ಕಾಗಿ ಇಂಥ ಕಠಿಣ ನಿರ್ಧಾರವನ್ನು ಜಪಾನ್ ಸರಕಾರ ತೆಗೆದುಕೊಂಡಿತು ಎಂಬುದು ಜಗತ್ತಿಗೂ ಗೊತ್ತಾಗಲಿ, ಅವರಲ್ಲೂ ಪರಿಸರ ಕಾಳಜಿ ಇನ್ನಷ್ಟು ಜಾಗೃತವಾಗಲಿ, ಪ್ರಗತಿ ಹೆಸರಿನಲ್ಲಿ ಪ್ರಕೃತಿಯನ್ನು ಧ್ವಂಸ ಮಾಡುವುದು ತಪ್ಪು ಎಂಬುದು ಎಲ್ಲರಿಗೂ ತಿಳಿಯಲಿ, ಅಭಿವೃದ್ಧಿಗೆ ಪರಿಸರವನ್ನು ಬಲಿ ಕೊಡಬಾರದು. ಹೆಚ್ಚು ದೇಶಗಳು, ನಗರಗಳು ಮತ್ತು ಸಂಸ್ಥೆಗಳು ಇಂಥ ಕ್ರಮಗಳನ್ನು ಅನುಸರಿಸಬೇಕು, ಭವಿಷ್ಯದ ತಲೆಮಾರುಗಳಿಗೆ ಆರೋಗ್ಯಕರ, ಹಸಿರು ಭೂಮಿಯನ್ನು ಉಳಿಸಿ ಕೊಡಬೇಕಾದ ಹೊಣೆ ನಮ್ಮೆಲ್ಲರ ಮೇಲಿದೆ ಎಂದು ಸರಕಾರ ಆಷ್ಟೊಂದು ಜಿಗುಟು ನಿಲುವು ತಾಳಿತು.

ಈ ನಿರ್ಧಾರದಿಂದಾಗಿ ಕೇವಲ ಒಂದು ಮರ ಉಳಿಯಲಿಲ್ಲ, ಬದಲಾಗಿ ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿ ಮತ್ತು ಪರಿಸರ ಹಾನಿಯ ನಡುವಿನ ಸಮತೋಲನ ಸಾಧಿಸುವ ಬಗ್ಗೆ ದೊಡ್ಡ ಚರ್ಚೆ ಶುರುವಾಯಿತು. ಇದು ಮುಂದಿನ ಪೀಳಿಗೆಗೆ ಆ 'ಮರ' ಪಾಠವಾಯಿತು. ಈ ರೀತಿ ಭಾವನಾತ್ಮಕ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವುದರ ಮೂಲಕ ಮಾತ್ರ ನಿಜವಾದ ಪ್ರಗತಿ ಸಾಧ್ಯ ಎಂಬುದನ್ನು ಜಪಾನ್ ತೋರಿಸಿಕೊಟ್ಟಿತು. ವಿಕಾಸ ಮತ್ತು ಪರಿಸರ ಒಂದೇ ಹಾದಿಯಲ್ಲಿ ಸಾಗಬೇಕು, ಆರ್ಥಿಕ ಲಾಭದ ಮೊದಲು, ಮಾನವ ಕುಲವು ಭೂಮಿಯ ಬಗ್ಗೆ ಭದ್ರತೆ ಮತ್ತು ಪ್ರೀತಿ ತೋರಿಸಬೇಕು, ಒಂದು ಮರವನ್ನು ಉಳಿಸುವುದು ಕೇವಲ ಪರಿಸರ ಸಂರಕ್ಷಣೆಯಲ್ಲ, ಅದು ಮುಂದಿನ ಪೀಳಿಗೆಗೆ ನಾವು ನೀಡುವ ಹಸಿರು ಭರವಸೆ, ಇದು ಹೆಚ್ಚುವರಿ ವೆಚ್ಚ ಉಂಟುಮಾಡಿದರೂ, ಅತಿ ದೊಡ್ಡ ಹಿತವೆಂದರೆ ಪರಿಸರಕ್ಕೆ ಕೊಡುವ ಗೌರವ ಎಂಬ ಸಂದೇಶವನ್ನು ಎತ್ತಿ ಹಿಡಿಯುವುದು ಮುಖ್ಯ, ಮರವನ್ನು ಕಡಿಯುವ ಪ್ರಸಂಗ ಬಂದಾಗ ಅದನ್ನು ಸ್ಥಳಾಂತರಿಸುವುದಕ್ಕಿಂತ ಅದರ ಐತಿಹಾಸಿಕ ಮಹತ್ವವನ್ನು ಉಳಿಸು ವುದು, ಅದನ್ನು ಆವಲಂಬಿಸಿರುವ ಜೀವಿಗಳ ಯೋಗಕ್ಷೇಮ ದ ಬಗ್ಗೆಯೂ ಯೋಚಿಸುವುದು ಮುಖ್ಯ. ಈ ಎಲ್ಲ ಕಾರಣಗಳಿಂದ, ಜಪಾನ್ ತನ್ನ ಸಂಸ್ಕೃತಿಯಲ್ಲಿರುವ ಪರಿಸರ ಪ್ರೇಮವನ್ನು ಮತ್ತೊಮ್ಮೆ ದೃಢಪಡಿಸಿತು.

ನಮ್ಮ ರಾಜ್ಯದ ಬಗ್ಗೆ ಮಾತಾಡದಿರುವುದೇ ಒಳ್ಳೆಯದು. ಯಾಕೆಂದರೆ ಒಂದು ರಸ್ತೆ ಅಗಲೀಕರಣದ ನೆಪವೊಡ್ಡಿ ನಾವು ಹಿಂದೆ ಮುಂದೆ ನೋಡದೇ ಸಾವಿರಾರು ಮರಗಳನ್ನು ನಿರ್ದಯವಾಗಿ ಕತ್ತರಿಸಿ ಹಾಕುತ್ತೇವೆ. ಆ ಬಗ್ಗೆ ಜನರೂ ಚಿಕಾರ ಎತ್ತುವುದಿಲ್ಲ. ಸರಕಾರಕ್ಕೆ ಅದು ಕಾಣುವುದೂ ಇಲ್ಲ. ಯಾರಾದರೂ ಬೊಬ್ಬೆ ಹೊಡೆದರೆ, ಯಾರೂ ಕೇಳಿಸಿಕೊಳ್ಳುವುದೂ ಇಲ್ಲ. ನಮಗೆ ಅದೊಂದು ಅತಿ ಮುಖ್ಯ ವಿಷಯ ಎಂದು ಅನಿಸುವುದೂ ಇಲ್ಲ. ಅಷ್ಟಕ್ಕೂ ಪರಿಸರವಾದಿಗಳಿಂದ ಪ್ರತಿರೋಧ ವ್ಯಕ್ತವಾಯಿತೆನ್ನೆ, ಕಂಟ್ರಾಕ್ಟರುಗಳು ಕಡಿದ ಮರಗಳಿಗೆ ಸಮ ಸಂಖ್ಯೆಯ ಗಿಡಗಳನ್ನು ನೆಡುತ್ತೇವೆ ಎಂಬ ವಚನ ನೀಡಿದರೆ, ಆ ಕಳ್ಳ ಕಂಟ್ರಾಕ್ಟರುಗಳು ತಮ್ಮ ಭರವಸೆಯಂತೆ ನಡೆದುಕೊಂಡರಾ ಎಂದು ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗಿರುವಾಗ ಒಂದು ಮರವನ್ನು ಉಳಿಸಿಕೊಳ್ಳುವ ಮಾತನ್ನಾಡಿದರೆ ನಮ್ಮಲ್ಲಿ ಅದೊಂದು ಶುದ್ಧ ಜೋಕ್ ಆದೀತು, ಅಪಹಾಸ್ಯಕ್ಕೀಡಾಗಬೇಕಾದೀತು. ರಸ್ತೆ ಅಗಲೀಕರಣಕ್ಕೇ ಕೊಡಲಿಗೆ ನೆಲಸಮವಾಗುವ ಮರಗಳ ಬಗ್ಗೆ ತಲೆ ಕೆಡಿಸಿಕೊಳ್ಳದ ನಾವು, ಇನ್ನು ದೊಡ್ಡ ದೊಡ್ಡ ಯೋಜನೆಗಳ ಹೆಸರಿನಲ್ಲಿ ಮಾರಣಹೋಮಕ್ಕೆ ತುತ್ತಾಗುವ ಮರಗಳಿಗೆ ಮಮ್ಮಲ ಮರುಗಲು ನಮಗೆ ಸಮಯ, ಸಂಯಮ ಎಲ್ಲಿದೆ? 'ಒಂದು ಮರ ಉಳಿಸಲು ಯೋಜನೆ ಬದಲಿಸಿದ ಜಪಾನ್ ಸರಕಾರ' ಎಂಬ ಶೀರ್ಷಿಕೆಯನ್ನು ನಮ್ಮ ಅರಣ್ಯ ಸಚಿವರಾಗಲಿ, ರಾಜಕಾರಣಿಗಳೇನಾದರೂ ಓದಿದರೆ, ಇದ್ಯಾಕೋ ಅತಿಯಾಯ್ತು' ಎಂದೋ, sheer uninteresting ಎಂದೋ, boring ಎಂದೋ, ಒಣ ಆದರ್ಶ ಎಂದೋ ಮುಖ ಕಿವುಚಿ ಪುಟ ತಿರುವಿ ಹಾಕಬಹುದು.

ಈ ವರ್ಷದ ಫೆಬ್ರವರಿಯಲ್ಲಿ ಕರ್ನಾಟಕ ಹೈಕೋರ್ಟ್ ಬೆಂಗಳೂರಿನಲ್ಲೊಂದೇ 2,848 ಮರಗಳನ್ನು ಕಡಿಯಲು ಅನುಮತಿ ನೀಡಿತು. ಕಡಿಯುವ ಒಂದು ಮರಕ್ಕೆ ತಲಾ ಹತ್ತು ಗಿಡಗಳನ್ನು ನೆಡುವಂತೆ ಆದೇಶಿಸಿತು. (ಅಂದು ಇಂಡಿಯನ್ ಎಕ್ಸ್‌ಪ್ರೆಸ್ ನೀಡಿದ ಹೆಡ್ ಲೈನ್ – Karnataka High Court allows felling of 2,848 trees in Bengaluru: The Court noted that against each tree to be felled, ten saplings should be planted). ಆಯ್ತು.. ಅಂದರೆ ಕಡಿಯುವ ಒಂದು ಮರಕ್ಕೆ ತಲಾ ಹತ್ತು ಗಿಡ ನೆಡಬೇಕು, ಅವುಗಳಿಗೆ ಬೇಲಿ ಕಟ್ಟಬೇಕು, ನೀರೆರೆಯಬೇಕು, ಪಾಲಿಸಬೇಕು, ಪೋಷಿಸಬೇಕು, ನಂತರ ಮರವಾಗಿ ಬೆಳೆಸಬೇಕು... ಇವನ್ನೆಲ್ಲ ಯಾರು ನೋಡಬೇಕು? ನಿಗಾ ಇಡಬೇಕು? ಲಕ್ಷ್ಯವಹಿಸಬೇಕು? ಈ ತೀರ್ಪಿನ ಪ್ರಕಾರ, ಮರ ಕಡಿದಿದ್ದಕ್ಕಾಗಿ 28,480 ಗಿಡಗಳನ್ನು ನೆಡಬೇಕು. ಎಲ್ಲಿ ನೆಡಬೇಕು? ಅಷ್ಟು ಜಾಗ ಇದೆಯಾ? ಅಷ್ಟು ಬೇಲಿಗಳು ಇವೆಯಾ? ಅವುಗಳಿಗೆ ನೀರನ್ನು ಹಾಕುವವರಾರು? ಅಷ್ಟು ಸಸ್ಯಗಳು ನರ್ಸರಿಯಲ್ಲಿ ಇವೆಯಾ? ಯಾವ ಜಾತಿಯ ಗಿಡಗಳನ್ನು ನೆಡಬೇಕು? ಈ ಯಾವ ವಿಷಯಗಳ ಬಗ್ಗೆಯೂ ತೀರ್ಪಿನಲ್ಲಿ ಇರಲಿಲ್ಲ.

ಕೆಲ ತಿಂಗಳು, ವರ್ಷಗಳ ಬಳಿಕ ಈ ತೀರ್ಪು ನೀಡಿದ ನ್ಯಾಯಾಧೀಶರು ವರ್ಗವಾಗಿಯೋ, ನಿವೃತ್ತರಾಗಿಯೋ ಹೋಗಿರುತ್ತಾರೆ, ಈ ಆದೇಶವನ್ನು ಪಾಲಿಸಬೇಕಾದ ಕಂಟ್ರಾಕ್ಟರ್ ಇಂಥ ನಾಲ್ಕು ಯೋಜನೆ ಟೆಂಡರ್ ಗಿಟ್ಟಿಸಿಕೊಂಡು ಕೊಬ್ಬಿ ನೆಮ್ಮದಿಯಿಂದಿರುತ್ತಾನೆ, ಅದನ್ನು ನೋಡಬೇಕಾದ ಅಧಿಕಾರಿಗಳು ಆ ಹೊತ್ತಿಗೆ ನಿವೃತ್ತರಾಗಿರುತ್ತಾರೆ, ಇದನ್ನು ವರದಿ ಮಾಡಿದ ಪತ್ರಕರ್ತರು ಇಡೀ ವಿಷಯವನ್ನೇ ಮರೆತಿರುತ್ತಾರೆ. ಅರಣ್ಯ ಸಚಿವರ ಖಾತೆಯೂ ಬದಲಾಗಿರುತ್ತದೆ ಅಥವಾ ಆತ ಮುಂದಿನ ಚುನಾವಣೆಯಲ್ಲಿ ಸೋತಿರುತ್ತಾನೆ, ಸರಕಾರ ಬದಲಾಗಿರುತ್ತದೆ, ಅಷ್ಟಕ್ಕೂ ಇವನ್ನೆಲ್ಲ ಯಾರು ನೆನಪಿಟ್ಟುಕೊಂಡಿರುತ್ತಾರೆ? ತಪ್ಪಿತಸ್ಥರ ವಿರುದ್ಧ ಹೋರಾಡಲು ಯಾರಿಗೆ ವ್ಯವಧಾನವಿದೆ?

ಇದಕ್ಕೆಲ್ಲ ಯಾರನ್ನು ದೂರೋಣ?